ಸಿಕ್ಕಿಲ್ಲ. ಇವತ್ತು ನಿಯಮ 68ರ ಪ್ರಕಾರ ನಾನು ಮತ್ತು ಎಸ್.ಜೆ.ಪಿ.ಯವರು ಒಂದು ನೋಟೀಸ್ ಅನ್ನು ಕೊಟ್ಟಿದ್ದೇವೆ.

ಉಪಾಧ್ಯಕ್ಷಿಣಿಯವರು:– ಅದನ್ನು ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

(ಗೊಂದಲ)

ಉಪಾಧ್ಯಕ್ಷಿಣಿಯವರು:– ಈ ಪ್ರಶ್ನೆಯನ್ನು ನಾನು ಇಲ್ಲಿಗೆ ಮುಗಿಸುತ್ತಿದ್ದೇನೆ.

SRI D.B. CHANDRE GOWDA:– It cannot be closed like that.

(ಗೊಂದಲ)

MADAM DEPUTY SPEAKER:– I have already announced that it will be taken up under Rule 68.

ಶ್ರೀ ಡಿ.ಬಿ. ಚಂದ್ರೇಗೌಡ:– ಇವತ್ತಿಗೆ ಸಬ್ಸಿಡಿ ಸ್ಕೀಮ್ ಮುಗಿಯುತ್ತಿದೆ. On 31st December, the subsidy will come to an end. It has come to an end, If this is the attitude, I cannot participate.

(ಗೊಂದಲ)

ಉಪಾಧ್ಯಕ್ಷಿಣಿಯವರು:– ಈಗ ಅವರು ಏನು ಹೇಳುತ್ತಾರೆ. ಅದನ್ನು ಕೇಳಿ.

(ಗೊಂದಲ)

ಶ್ರೀ ಬಿ. ಹೆಚ್ ಬನ್ನಿಕೋಡ್:– ರೈತ ವಿರೋಧಿ ಸರ್ಕಾರಕ್ಕೆ ಧಿಕ್ಕಾರ.

SRI R.V. DESHPANDE: We walk out protesting against the reply.

(ಗೊಂದಲ)

(ಜನತಾ ದಳದ ಸದಸ್ಯರು, ಭಾರತೀಯ ಜನತಾ ಪಕ್ಷದ ಸದಸ್ಯರು, ಮತ್ತು ಪಕ್ಷೇತರ ಶಾಸಕರಾದ ಮಾನ್ಯ ವಾಟಾಳ್ ನಾಗರಾಜ್ ಅವರು ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅವರು ಉತ್ತರವನ್ನು ಕೇಳಲಿಕ್ಕೆ ತಯಾರಿಲ್ಲ ಅಂದರೆ ಹೇಗೆ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ:– ನಾನು ಸ್ಪಷ್ಟವಾಗಿ ಹೇಳಿದ್ದೇನೆ.

ಉಪಾಧ್ಯಕ್ಷಿಣಿಯವರು:– ನಾನು ಇದನ್ನು ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ. ಮಾನ್ಯ ಮಂತ್ರಿಗಳು ಏನೋ ಹೇಳುತ್ತೇನೆ ಎಂದು ಇದ್ದಾರೆ. ದಯವಿಟ್ಟು ಅವರಿಗೆ ಅವಕಾಶ ಮಾಡಿ.

ಪ್ರೊ. ಎಂ.ಡಿ. ನಂಜುಂಡಸ್ವಾಮಿ:– ನಾನು ಒಂದೇ ಒಂದು ವಾಕ್ಯವನ್ನು ಕೇಳುತ್ತೇನೆ. ಮಾನ್ಯ ಚಂದ್ರೇಗೌಡರು ಹಾಕಿದಂತಹ ಪ್ರಶ್ನೆಯಲ್ಲಿ ನೀತಿ ಪ್ರಶ್ನೆ ಬಂದಿದೆ. ಆದರೆ ರಾಜ್ಯಕ್ಕೆ ಒಂದು ಕೃಷಿ ನೀತಿ ಇದೆಯೋ ಎಂದು ನಾನು ಕೇಳುತ್ತಿದ್ದೇನೆ. ಮತ್ತೆ ಈ ಸರ್ಕಾರಕ್ಕೆ ಅದು ಗೊತ್ತಿದೆಯೇ ? ಕೃಷಿಕರನ್ನು ರಾಜ್ಯ ಸಂವಿಧಾನದ ಪಟ್ಟಿಯಲ್ಲಿ ಇರುವುದು ನೆನಪು ಇದೆಯಾ ಎಂದು ನಾನು ಕೇಳುತ್ತಿದ್ದೇನೆ. ಏಕೆಂದರೆ ಯಾವುದೇ ಕೃಷಿ ನೀತಿ, ದೇಶದಲ್ಲಿ ಬದಲಾವಣೆಯಾಗಬೇಕಾದರೆ ರಾಜ್ಯ ಸರ್ಕಾರಗಳನ್ನು ಸಂಪರ್ಕ ಮಾಡಿ ಕೇಂದ್ರ ಸರ್ಕಾರ ಅದರ ಅಭಿಪ್ರಾಯವನ್ನು ತೆಗೆದುಕೊಂಡು ಮಾಡಬೇಕು; ಅದನ್ನು ಮಾಡಿಲ್ಲ. ಆದರೂ ಈ ಸರ್ಕಾರ ತೆಪ್ಪಗೆ ಕುಳಿತಿದೆ. ತನ್ನ ಹಕ್ಕೇನು ಸಂವಿಧಾನದಲ್ಲಿ ಇದೆ ಅದನ್ನು ಚಲಾಯಿಸಿಲ್ಲ.